**ದಿನಾಂಕ: 09.02.2022 ರಂದು ಪೂರ್ವಾಹ್ನ 11.00 ಗಂಟೆಗೆ ಡಾ|| ಜಿ.ಸಿ. ಪ್ರಕಾಶ್. ಭಾ.ಆ.ಸೇ. ಅಧ್ಯಕ್ಷರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಜರುಗಿದ ಮೈಸೂರು ವನ್ಯಜೀವಿ ವಿಭಾಗದ ವನ್ಯಧಾಮಗಳ ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಸಭೆಯ ನಡವಳಿಗಳು.**

**ಸಭೆಯಲ್ಲಿ ಉಪಸ್ಥಿತರಿದ್ದವರು:**

1. ಡಾ|| ಜಿ.ಸಿ. ಪ್ರಕಾಶ್. ಭಾ.ಆ.ಸೇ. ಅಧ್ಯಕ್ಷರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
2. ಡಾ|| ಬಗಾದಿ ಗೌತಮ್ , ಭಾ.ಆ.ಸೇ. ಸದಸ್ಯರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.
3. ಶ್ರೀ ರವೀಂದ್ರ ಶ್ರೀಕಂಠಯ್ಯ, ಸದಸ್ಯರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಮಾನ್ಯ ಶಾಸಕರು, ಶ್ರೀರಂಗಪಟ್ಟಣ ವಿಧಾನಸಭೆ ಕ್ಷೇತ್ರ.
4. ಶ್ರೀ ಪುಟ್ಟರಾಜು ಸಿ.ಎಸ್., ಸದಸ್ಯರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಪಾಂಡವಪುರ ವಿಧಾನಸಭೆ ಕ್ಷೇತ್ರ.
5. ಶ್ರೀ.ಬಿ.ಸಿ.ಶಿವಾನಂದ ಮೂರ್ತಿ, ಉಪ ವಿಭಾಗಾಧಿಕಾರಿಗಳು, ಪಾಂಡವಪುರ ಉಪ ವಿಭಾಗ, ಪಾಂಡವಪುರ.
6. ಶ್ರೀ ಕೆ.ಬಿ.ಪ್ರಭುಸ್ವಾಮಿ, ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ಜಿಲ್ಲೆ.
7. ಶ್ರೀಮತಿ ಜಯಲಕ್ಷ್ಮಿ ಎಂ.ಜಿ. ಉಪ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೈಸೂರು (ಗ್ರಾಮಾಂತರ).
8. ಶ್ರೀಮತಿ ಅಶ್ವಿನಿ ಬಿ.ಕೆ. ಉಪ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಂಡ್ಯ.
9. ಡಾ|| ವಿ.ಕರಿಕಾಳನ್ ಭಾ.ಅ.ಸೇ. ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು.
10. ಶ್ರೀ ಸುರೇಂದ್ರ, ವಲಯ ಅರಣ್ಯಾಧಿಕಾರಿಗಳು, ಮೈಸೂರು ವನ್ಯಜೀವಿ ವಲಯ, ಮೈಸೂರು.
11. ಶ್ರೀ ಸುಬ್ರಮಣ್ಯ ಕೆ.ಇ. ವಲಯ ಅರಣ್ಯಾಧಿಕಾರಿಗಳು, ಮೇಲುಕೋಟೆ ವನ್ಯಜೀವಿ ವಲಯ, ಮೇಲುಕೋಟೆ.

ಡಾ|| ಜಿ.ಸಿ. ಪ್ರಕಾಶ್. ಭಾ.ಆ.ಸೇ. ಅಧ್ಯಕ್ಷರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರು ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲು ಡಾ|| ವಿ.ಕರಿಕಾಳನ್ ಭಾ.ಅ.ಸೇ. ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ರವರಿಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ಇವರು ಪ್ರಾತ್ಯಕ್ಷಿಕೆಯನ್ನು ಪ್ರಸ್ತುತಪಡಿಸಿ, ರಂಗನತಿಟ್ಟು ಪಕ್ಷಿಧಾಮ, ಅರಬಿತಿಟ್ಟು ವನ್ಯಧಾಮ ಮತ್ತು ಮೇಲುಕೋಟೆ ವನ್ಯಧಾಮಗಳ ವಿಸ್ತೀರ್ಣ ಮತ್ತು ಸೂಕ್ಷ್ಮ ಪರಿಸರ ವಲಯದ ವ್ಯಾಪ್ತಿಯ ವಿವರಗಳನ್ನು ವಿವರಿಸಿದರು. ನಂತರ ಸೂಕ್ಷ್ಮ ಪರಿಸರ ವಲಯದ Prohibited, Regulated and Promoted Activities ರಡಿಯಲ್ಲಿ ಬರುವ ಚಟುವಟಿಕೆಗಳ ಬಗ್ಗೆ ಹಾಗೂ ಮಾನಿಟರಿಂಗ ಕಮಿಟಿಯಲ್ಲಿರುವಂತಹ ಸದಸ್ಯರುಗಳ ಬಗ್ಗೆ ಮಾಹಿತಿ ನೀಡಿ,

E-59955 2/22
18/3/22

ನಂತರ ಸರ್ಕಾರೇತರ ಸಂಸ್ಥೆಗಳು/ಪ್ರತಿನಿಧಿಗಳ ನಾಮನಿರ್ದೇಶನ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ವಿವರಣೆ ನೀಡಿದರು.

ನಂತರ ಈ ಹಿಂದೆ ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿಯಲ್ಲಿ ಅನುಮೋದಿತ ಪ್ರಸ್ತಾವನೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಹಾಗೂ ಪ್ರಸ್ತುತ ಸಾಲಿನಲ್ಲಿ ಸಭೆಯ ಅನುಮೋದನೆಗಾಗಿ ಇರುವ ಪ್ರಸ್ತಾವನೆಗಳು ಒಟ್ಟು 6 ಸಂಖ್ಯೆ ಇದ್ದು ಚರ್ಚೆ ಮಾಡುವುದಾಗಿ ತಿಳಿಸಿದರು.

**ಪ್ರಸ್ತಾವನೆ ಸಂಖ್ಯೆ-1:- ಶ್ರೀಮತಿ ನಯನ ಪಿ. D/o ಪುಟ್ಟಸ್ವಾಮಿ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಪಾಲಹಳ್ಳಿ (ಕರಿಮಂಟಿ) ಗ್ರಾಮದ ಸ.ನಂ. 6/*/3 ರಲ್ಲಿ 1.10.00 ಗುಂಟೆ ಜಮೀನನ್ನು ಅನ್ಯಕ್ರಾಂತ ಉದ್ದೇಶಕ್ಕಾಗಿ (ಹೋಂ ಸ್ಟೇ) ಭೂ ಪರಿವರ್ತನೆ ಕೋರಿ**

ಸದರಿ ಪ್ರಸ್ತಾಪಿತ ಪ್ರದೇಶವು ರಂಗನತಿಟ್ಟು ಸೂಕ್ಷ್ಮ ಪರಸರ ವಲಯದ ವ್ಯಾಪ್ತಿಗೆ ಬರುತ್ತಿದ್ದು, ಸದರಿಯವರು ಪ್ರಸ್ತಾಪಿತ ಪ್ರದೇಶದಲ್ಲಿ ಹೋಂ ಸ್ಟೇ ಮಾಡಲು ಉದ್ದೇಶಿಸಿರುವುದಾಗಿ ಹಾಗೂ ರಂಗನತಿಟ್ಟು ಪಕ್ಷಿಧಾಮದ ಪುಟ್ಟಯ್ಯನಕೊಪ್ಪಲು ದ್ವೀಪದ ಗಡಿರೇಖೆಯಿಂದ 1.21 ಕಿ.ಮೀ. ದೂರದಲ್ಲಿದ್ದು, ಸೂಕ್ಷ್ಮ ಪರಿಸರ ವಲಯದ ಅಂತಿಮ ಅಧಿಸೂಚನೆಯಂತೆ, ಅರಣ್ಯ ಪ್ರದೇಶದ ಗಡಿರೇಖೆಯಿಂದ 1.00 ಕಿ.ಮೀ.ವರೆಗೆ ಯಾವುದೇ ನಿರ್ಮಾಣ ಚಟುವಟಿಕೆಗಳಿಗೆ ಅವಕಾಶವಿರುವುದಿಲ್ಲ. ಆದರೆ ಸದರಿ ಪ್ರಸ್ತಾವನೆಯು ಪುಟ್ಟಯ್ಯನಕೊಪ್ಪಲು ದ್ವೀಪದ ಗಡಿರೇಖೆಯಿಂದ 1.21 ಕಿ.ಮೀ. ದೂರದಲ್ಲಿದ್ದು, ರೆಗ್ಯುಲೆಟೆಡ್ ಚಟುವಟಿಕೆಗಳಡಿಯಲ್ಲಿ ಬರುವುದರಿಂದ ಷರತ್ತುಬದ್ಧ ಅನುಮೋದನೆ ನೀಡಬಹುದಾಗಿರುತ್ತದೆ ಎಂದು ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ಇವರು ಸಭೆಗೆ ತಿಳಿಸಿದರು.

ಈ ಬಗ್ಗೆ ಅಧ್ಯಕ್ಷರು, ಅರ್ಜಿದಾರರಾದ ಶ್ರೀಮತಿ ನಯನ ಪಿ. D/o ಪುಟ್ಟಸ್ವಾಮಿ ಇವರ ಬಳಿ ಉದ್ದೇಶಿತ ಪ್ರಸ್ತಾವನೆಯ ಬಗ್ಗೆ ವಿವರಣೆ ಕೇಳಿ ನಂತರ ಸಭೆಯಲ್ಲಿ ಹಾಜರಿದ್ದ ಸದಸ್ಯರ ಬಳಿ ಅಭಿಪ್ರಾಯವನ್ನು ಕೇಳಿದಾಗ ಎಲ್ಲಾ ಸದಸ್ಯರು ಸದರಿ ಪ್ರಸ್ತಾವನೆಗೆ ಷರತ್ತುಬದ್ಧ ಅನುಮೋದನೆ ನೀಡಲು ಒಪ್ಪಿದ್ದರಿಂದ ಹೋಂಸ್ಟೇ ಮಾರ್ಗಸೂಚಿಯ ಪ್ರಕಾರ ಹಾಗೂ ವನ್ಯಪ್ರಾಣಿ-ಪಕ್ಷಿಗಳ ಸಂಕುಲಕ್ಕೆ ತೊಂದರೆಯಾಗದಂತೆ ತ್ಯಾಜ್ಯ ವಸ್ತುಗಳ ವಿಲೇವಾರಿ, ಶಬ್ದ ಮಾಲಿನ್ಯ ಆಗದಂತೆ ಮತ್ತು ಪರಿಸರಕ್ಕೆ ಧಕ್ಕೆಯಾಗದಂತೆ ನಿರ್ವಹಣೆ ಮಾಡುವ ಬಗ್ಗೆ ಅರ್ಜಿದಾರರು ಮುಚ್ಚಳಿಕೆ ನೀಡುವುದರ ಮೂಲಕ ಷರತ್ತುಗಳೊಂದಿಗೆ ಪ್ರಸ್ತಾವನೆಗೆ ಅನುಮೋದನೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಪ್ರಸ್ತಾವನೆ ಸಂಖ್ಯೆ-2:-ಶ್ರೀ ಆರ್. ವಿಶ್ವನಾಥ್, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಕರಿಮಂಟಿ ಗ್ರಾಮದ ಸ.ನಂ. 46/*/9 ರಲ್ಲಿ 0.20.00 ಗುಂಟೆ ಜಮೀನನ್ನು ಕೃಷಿಯೇತರ (ಕಮರ್ಷಿಯಲ್) ಪೆಟ್ರೋಲ್ ಬಂಕ್ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ**

ಸದರಿ ಪ್ರಸ್ತಾಪಿತ ಪ್ರದೇಶವು ರಂಗನತಿಟ್ಟು ಪಕ್ಷಿಧಾಮದ ಸೂಕ್ಷ್ಮ ಪರಸರ ವಲಯದ ವ್ಯಾಪ್ತಿಗೆ ಬರುತ್ತಿದ್ದು, ಸದರಿಯವರು ಪ್ರಸ್ತಾಪಿತ ಪ್ರದೇಶದಲ್ಲಿ ಪೆಟ್ರೋಲ್ ಬಂಕ್ ಮಾಡಲು ಉದ್ದೇಶಿಸಿರುವುದಾಗಿ ಹಾಗೂ ರಂಗನತಿಟ್ಟು ಪಕ್ಷಿಧಾಮದ ಪುಟ್ಟಯ್ಯನಕೊಪ್ಪಲು ದ್ವೀಪದ ಗಡಿರೇಖೆಯಿಂದ 1.30 ಕಿ.ಮೀ. ದೂರದಲ್ಲಿದ್ದು, ಸೂಕ್ಷ್ಮ ಪರಿಸರ ವಲಯದ ಅಂತಿಮ ಅಧಿಸೂಚನೆಯಂತೆ, ಅರಣ್ಯ ಪ್ರದೇಶದ ಗಡಿರೇಖೆಯಿಂದ 1.00 ಕಿ.ಮೀ.ವರೆಗೆ ಯಾವುದೇ ನಿರ್ಮಾಣ ಚಟುವಟಿಕೆಗಳಿಗೆ ಅವಕಾಶವಿರುವುದಿಲ್ಲ. ಆದರೆ ಸದರಿ ಪ್ರಸ್ತಾವನೆಯು ಪುಟ್ಟಯ್ಯನಕೊಪ್ಪಲು ದ್ವೀಪದ ಗಡಿರೇಖೆಯಿಂದ 1.30 ಕಿ.ಮೀ. ದೂರದಲ್ಲಿರುವುದರಿಂದ ಷರತ್ತುಬದ್ಧ ಅನುಮೋದನೆ ನೀಡಬಹುದಾಗಿರುತ್ತದೆ ಎಂದು ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ಇವರು ಸಭೆಗೆ ತಿಳಿಸಿದರು.

ಈ ಬಗ್ಗೆ ಅಧ್ಯಕ್ಷರು, ಅರ್ಜಿದಾರರು ಶ್ರೀ ಆರ್. ವಿಶ್ವನಾಥ್, ಇವರ ಬಳಿ ಉದ್ದೇಶಿತ ಪ್ರಸ್ತಾವನೆಯ ಬಗ್ಗೆ ವಿವರಣೆ ಕೇಳಿ, ನಂತರ ಸಭೆಯಲ್ಲಿ ಹಾಜರಿದ್ದ ಸದಸ್ಯರ ಬಳಿ ಅಭಿಪ್ರಾಯವನ್ನು ಕೇಳಿದಾಗ ಎಲ್ಲಾ ಸದಸ್ಯರು ಸದರಿ ಪ್ರಸ್ತಾವನೆಗೆ ಷರತ್ತುಬದ್ಧ ಅನುಮೋದನೆ ನೀಡಲು ಒಪ್ಪಿದ್ದರಿಂದ ಸರ್ಕಾರದ ನೀತಿ-ನಿಯಮಗಳಿಗೆ ಧಕ್ಕೆಯಾಗದಂತೆ ಹಾಗೂ ತ್ಯಾಜ್ಯ ವಸ್ತುಗಳ ವಿಲೇವಾರಿ, ಶಬ್ದ ಮಾಲಿನ್ಯ ಆಗದಂತೆ ಮತ್ತು ಪರಿಸರ ಮತ್ತು ವನ್ಯಪ್ರಾಣಿ-ಪಕ್ಷಿ ಸಂಕುಲಗಳಿಗೆ ತೊಂದರೆಯಾಗದಂತೆ ನಿರ್ವಹಣೆ ಮಾಡುವ ಬಗ್ಗೆ ಅರ್ಜಿದಾರರು ಮುಚ್ಚಳಿಕೆ ನೀಡುವುದರ ಮೂಲಕ ಷರತ್ತುಗಳೊಂದಿಗೆ ಪ್ರಸ್ತಾನೆಗೆ ಅನುಮೋದನೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಪ್ರಸ್ತಾವನೆ ಸಂಖ್ಯೆ-3 ಶ್ರೀ ಎಸ್.ಮಹೇಶ್ ಬಿನ್ ಶಿವಬಸಪ್ಪ ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಮಲ್ಲಿನಾಥಪುರ ಗ್ರಾಮದ ಸರ್ವೇ ಸಂಖ್ಯೆ: 228/2, ರಲ್ಲಿ 1.20 ಎಕರೆ ಪ್ರದೇಶವನ್ನು ವ್ಯವಸಾಯೇತರ ವಸತಿ ಲೇಔಟ್ ಉದ್ದೇಶಕ್ಕೆ ಭೂ ಪರಿವರ್ತನೆ ಕೋರಿ.**

ಸದರಿ ಪ್ರಸ್ತಾಪಿತ ಪ್ರದೇಶವು ಅರಬಿತಿಟ್ಟು ಸೂಕ್ಷ್ಮ ಪರಸರ ವಲಯದ ವ್ಯಾಪ್ತಿಗೆ ಬರುತ್ತಿದ್ದು, ಅರಬಿತಿಟ್ಟು ವನ್ಯಧಾಮ ಗಡಿರೇಖೆಯಿಂದ 47.03 ಮೀಟರ್ (0.047 ಕಿ.ಮೀ.) ಅಂತರದಲ್ಲಿರುತ್ತದೆ. ಸದರಿ ಪ್ರದೇಶದಲ್ಲಿ ವಸತಿ ಬಡವಾಣೆ ಮಾಡಲು ಉದ್ದೇಶಿಸಿರುವುದಾಗಿ ಹಾಗೂ ಅರಬಿತಿಟ್ಟು ವನ್ಯಧಾಮದ ಸೂಕ್ಷ್ಮ ಪರಿಸರ ವಲಯದ ಅಂತಿಮ ಅಧಿಸೂಚನೆಯಂತೆ, ಅರಣ್ಯ ಪ್ರದೇಶದ ಗಡಿರೇಖೆಯಿಂದ 1.00 ಕಿ.ಮೀ.ವರೆಗೆ ಯಾವುದೇ ನಿರ್ಮಾಣ ಚಟುವಟಿಕೆಗಳಿಗೆ ಅವಕಾಶವಿರುವುದಿಲ್ಲ. ಆದರೆ ಸದರಿ ಪ್ರಸ್ತಾವನೆಯು, ಮಲ್ಲಿನಾಥಪುರದ ಗ್ರಾಮದ ವ್ಯಾಪ್ತಿಗೆ ಬರುತ್ತಿದ್ದು, ಅರಬಿತಿಟ್ಟು ವನ್ಯಧಾಮದ ಗಡಿರೇಖೆಯಿಂದ ಕೇವಲ 0.047 ಕಿ.ಮೀ. ಅಂತರವಿರುವುದರಿಂದ, ಸದರಿ ಪ್ರಸ್ತಾವನೆಗೆ ಅನುಮತಿ ನೀಡಲು ಬರುವುದಿಲ್ಲ ಅಲ್ಲದೇ ಉದ್ದೇಶಿತ ಬಡಾವಣೆಯು ವನ್ಯಧಾಮದ ತೀರ ಸಮೀಪವೇ ನಿರ್ಮಾಣವಾಗುವುದರಿಂದ ವನ್ಯಪ್ರಾಣಿಗಳು ಸದರಿ ಜನವಸತಿ ಪ್ರದೇಶಗಳಿಗೆ ದಾಳಿ ಮಾಡುವ ಹಾಗೂ ಮಾನವ-ವನ್ಯಪ್ರಾಣಿ ಸಂಘರ್ಷ ಉಂಟಾಗುವ ಸಂಭವವಿರುತ್ತದೆ ಎಂದು ಸಭೆಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗಳಿಗೆ ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ಇವರು ವಿವರಣೆ ನೀಡಿದರು.

ಈ ಬಗ್ಗೆ ಅಧ್ಯಕ್ಷರು ಅರ್ಜಿದಾರರನ್ನು ಸದರಿ ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ಉದ್ದೇಶಗಳ ಬಗ್ಗೆ ವಿವರಣೆಯನ್ನು ಕೇಳಿದಾಗ ಅರ್ಜಿದಾರರು ಸದರಿ ಪ್ರದೇಶದಲ್ಲಿ ಸುಮಾರು 25 ಮನೆಗಳನ್ನು ವಸತಿ ಬಡಾವಣೆಯ ಉದ್ದೇಶಕ್ಕಾಗಿ ನಿರ್ಮಾಣ ಮಾಡುತ್ತಿರುವುದಾಗಿ ತಿಳಿಸಿದರು.

ನಂತರ ಅಧ್ಯಕ್ಷರು ಮಾತನಾಡಿ, ಸದರಿ ವಸತಿ ಬಡಾವಣೆಯ ನಿರ್ಮಾಣ ಉದ್ದೇಶವು ಅರಬಿತಿಟ್ಟು ವನ್ಯಧಾಮ ಸಮೀಪವೇ ಇರುವುದರಿಂದ ಹಾಗೂ ಸೂಕ್ಷ್ಮ ಪರಿಸರ ವಲಯದ ಅಂತಿಮ ಅಧಿಸೂಚನೆಯಂತೆ, ಅರಣ್ಯ ಪ್ರದೇಶದ ಗಡಿರೇಖೆಯಿಂದ 1.00 ಕಿ.ಮೀ.ವರೆಗೆ ಯಾವುದೇ ನಿರ್ಮಾಣ ಚಟುವಟಿಕೆಗಳಿಗೆ ಅವಕಾಶವಿಲ್ಲದೇ ಇರುವುದರಿಂದ ಹಾಗೂ ಭಾರತೀಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಶಾಖೆ (DRDO) ಇರುವುದರಿಂದ ಸದರಿ ಪ್ರಸ್ತಾವನೆಗೆ ಅನುಮತಿ ನೀಡಲು ಸಾಧ್ಯವಿಲ್ಲ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಪ್ರಸ್ತಾವನೆ ಸಂಖ್ಯೆ-4:- ಶ್ರೀ ಅಶೋಕ್ ಪಟೇಲ್ ಎಂ ಬಿನ್ ಲೇ|| ಸಿ. ಮಹದೇವಪ್ಪ ಇವರಿಗೆ ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಮಲ್ಲಿನಾಥಪುರ ಗ್ರಾಮದ ಸರ್ವೇ ಸಂಖ್ಯೆ: 227/1, 237/1, 228/3 ಮತ್ತು 228/4 ಗಳಲ್ಲಿ ಒಟ್ಟು 3.18 ಎಕರೆ ಜಮೀನನ್ನು ವ್ಯವಸಾಯೇತರ ವಸತಿ ಲೇಔಟ್ ಉದ್ದೇಶಕ್ಕೆ ಭೂ ಪರಿವರ್ತನೆ ಕೋರಿರುವುದು.**

ಸದರಿ ಪ್ರಸ್ತಾಪಿತ ಪ್ರದೇಶವು ಅರಬಿತಿಟ್ಟು ಸೂಕ್ಷ್ಮ ಪರಸರ ವಲಯದ ವ್ಯಾಪ್ತಿಗೆ ಬರುತ್ತಿದ್ದು, ಅರಬಿತಿಟ್ಟು ವನ್ಯಧಾಮದ ಗಡಿರೇಖೆಯಿಂದ 48.55 ಮೀಟರ್ (0.048 ಕಿ.ಮೀ.) ಅಂತರದಲ್ಲಿರುತ್ತದೆ. ಸದರಿ ಪ್ರದೇಶದಲ್ಲಿ ವಸತಿ ಬಡಾವಣೆ ಮಾಡಲು ಉದ್ದೇಶಿಸಿರುವುದಾಗಿ ಹಾಗೂ ಅರಬಿತಿಟ್ಟು ವನ್ಯಧಾಮದ ಸೂಕ್ಷ್ಮ ಪರಿಸರ ವಲಯದ ಅಂತಿಮ ಅಧಿಸೂಚನೆಯಂತೆ, ಅರಣ್ಯ ಪ್ರದೇಶದ ಗಡಿರೇಖೆಯಿಂದ 1.00 ಕಿ.ಮೀ.ವರೆಗೆ ಯಾವುದೇ ನಿರ್ಮಾಣ ಚಟುವಟಿಕೆಗಳಿಗೆ ಅವಕಾಶವಿರುವುದಿಲ್ಲ. ಆದರೆ ಸದರಿ ಪ್ರಸ್ತಾವನೆಯು ಸಹ ಪ್ರಸ್ತಾವನೆ ಸಂಖ್ಯೆ 3ಕ್ಕೆ ಹೊಂದಿಕೊಂಡಿಂತಿರುವ ಪ್ರದೇಶಗಳಾಗಿದ್ದು ಮಲ್ಲಿನಾಥಪುರದ ಗ್ರಾಮದ ವ್ಯಾಪ್ತಿಗೆ ಬರುತ್ತದೆ. ಅರಬಿತಿಟ್ಟು ವನ್ಯಧಾಮದ ಗಡಿರೇಖೆಯಿಂದ ಕೇವಲ 0.048 ಕಿ.ಮೀ. ಅಂತರವಿರುವುದರಿಂದ, ಸದರಿ ಪ್ರಸ್ತಾವನೆಗೆ ಅನುಮತಿ ನೀಡಲು ಬರುವುದಿಲ್ಲ ಅಲ್ಲದೇ ಉದ್ದೇಶಿತ ಬಡಾವಣೆಯು ವನ್ಯಧಾಮದ ತೀರ ಸಮೀಪವೇ ನಿರ್ಮಾಣವಾಗುವುದರಿಂದ ವನ್ಯಪ್ರಾಣಿಗಳು ಸದರಿ ಜನವಸತಿ ಪ್ರದೇಶಗಳಿಗೆ ದಾಳಿ ಮಾಡುವ ಹಾಗೂ ಮಾನವ-ವನ್ಯಪ್ರಾಣಿ ಸಂಘರ್ಷ ಉಂಟಾಗುವ ಸಂಭವವಿರುತ್ತದೆ ಎಂದು ಸಭೆಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗಳಿಗೆ ಸದಸ್ಯ ಕಾರ್ಯಧರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ಇವರು ವಿವರಣೆ ನೀಡಿದರು.

ನಂತರ ಅಧ್ಯಕ್ಷರು ಮಾತನಾಡಿ, ಸದರಿ ವಸತಿ ಬಡಾವಣೆಯ ನಿರ್ಮಾಣ ಉದ್ದೇಶವು ಅರಬಿತಿಟ್ಟು ವನ್ಯಧಾಮ ಸಮೀಪವೇ ಇರುವುದರಿಂದ ಹಾಗೂ ಸೂಕ್ಷ್ಮ ಪರಿಸರ ವಲಯದ ಅಂತಿಮ ಅಧಿಸೂಚನೆಯಂತೆ, ಅರಣ್ಯ ಪ್ರದೇಶದ ಗಡಿರೇಖೆಯಿಂದ 1.00 ಕಿ.ಮೀ.ವರೆಗೆ ಯಾವುದೇ ನಿರ್ಮಾಣ ಚಟುವಟಿಕೆಗಳಿಗೆ ಅವಕಾಶವಿಲ್ಲದೇ ಇರುವುದರಿಂದ ಹಾಗೂ ಭಾರತೀಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಶಾಖೆ (DRDO ) ಇರುವುದರಿಂದ ಸದರಿ ಪ್ರಸ್ತಾವನೆಗೆ ಅನುಮತಿ ನೀಡಲಾಗುವುದಿಲ್ಲ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಪ್ರಸ್ತಾವನೆ ಸಂಖ್ಯೆ-5:- ಶ್ರೀ ಕೆ.ಆರ್.ಕೃಷ್ಣೇಗೌಡ, ಬಿನ್ ಓ.ಜಿ.ರಾಮೇಗೌಡ, ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಮೇಲುಕೋಟೆ ಗ್ರಾಮದ ಸರ್ವೇ ನಂ.51/*/12 ರಲ್ಲಿ 0.3.0.00 ಗುಂಟೆ ಜಮೀನನ್ನು ಕೃಷಿಯೇತರ (ರೆಸಿಡೆನ್ಸಿಯಲ್) ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ.**

ಶ್ರೀ ಕೆ.ಆರ್.ಕೃಷ್ಣೇಗೌಡ, ಬಿನ್ ಓ.ಜಿ.ರಾಮೇಗೌಡ, ಮೇಲುಕೋಟೆ ಗ್ರಾಮ ಇವರು ಸ್ವಂತ ಜಾಗದಲ್ಲಿ ವಾಸಿಸಲು ಮನೆ ಕಟ್ಟುವುದಕ್ಕಾಗಿ ಅನುಮತಿ ಕೋರಿದ್ದು, ಸದರಿ ಪ್ರದೇಶವು ಮೇಲುಕೋಟೆ ವನ್ಯಜೀವಿ ವಲಯದ ಸೂಕ್ಷ್ಮ ಪರಿಸರ ವಲಯದ ವ್ಯಾಪ್ತಿಗೆ ಬರುತ್ತಿದ್ದು, ವನ್ಯಧಾಮದ ಗಡಿರೇಖೆಯಿಂದ 1.00 ಕಿ.ಮೀ. ದೂರದಲ್ಲಿರುತ್ತದೆ. ಸದರಿಯವರು 0.3.0.00ಗುಂಟೆ ಜಮೀನಿನಲ್ಲಿ ವಾಸಿಸಲು ಮನೆ ಕಟ್ಟುವುದಕ್ಕೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಹಾಗೂ ಅನುಮೋದನೆ ನೀಡಬಹುದೆಂದು ಸಭೆಯ ಅಧ್ಯಕ್ಷರಿಗೆ ಹಾಗೂ ಸದಸ್ಯರುಗಳಿಗೆ ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ಇವರು ವಿವರಣೆ ನೀಡಿದರು.

ಈ ಬಗ್ಗೆ ಅಧ್ಯಕ್ಷರು ಅರ್ಜಿದಾರರನ್ನು ಸದರಿ ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ಉದ್ದೇಶಗಳ ಬಗ್ಗೆ ವಿವರಣೆಯನ್ನು ಕೇಳಿದಾಗ ಅರ್ಜಿದಾರರು ಸದರಿ ಪ್ರದೇಶದಲ್ಲಿ ವಾಸ ಮಾಡಲು ಒಂದು ಮನೆಯನ್ನು ಕಟ್ಟಲು ಉದ್ದೇಶಿಸಿರುವುದಾಗಿ ತಿಳಿಸಿದರು.

ಅರ್ಜಿದಾರರು ಸ್ವತಃ ವಾಸಿಸಲು 0.3.0.00 ಗುಂಟೆ ಜಮೀನಿನಲ್ಲಿ ಮನೆ ಕಟ್ಟುತ್ತಿರುವುದಕ್ಕೆ ಯಾವುದೇ ಆಭ್ಯಂತರವಿಲ್ಲದ ಕಾರಣ ಷರತ್ತುಗಳೊಂದಿಗೆ ಪ್ರಸ್ತಾವನೆಗೆ ಅನುಮೋದನೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಪ್ರಸ್ತಾವನೆ ಸಂಖ್ಯೆ-6:- ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಮೇಲುಕೋಟೆ ಗ್ರಾಮದ ಸರ್ವೇ ನಂ. 118/*3 ರಲ್ಲಿ 1.16.0.00 ಎಕರೆ ಜಮೀನನ್ನು ಕೃಷಿಯೇತರ (Cultural and religious Institutions) ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ.**

ಸದರಿ ಪ್ರಸ್ತಾಪಿತ ಪ್ರದೇಶವು ಮೇಲುಕೋಟೆ ವನ್ಯಧಾಮದ ಸೂಕ್ಷ್ಮ ಪರಸರ ವಲಯದ ವ್ಯಾಪ್ತಿಗೆ ಬರುತ್ತಿದ್ದು, ಮೇಲುಕೋಟೆ ವನ್ಯಧಾಮ ಗಡಿರೇಖೆಯಿಂದ 0.660 ಕಿ.ಮೀ. ಅಂತರದಲ್ಲಿರುತ್ತದೆ. ಸದರಿ ಪ್ರದೇಶದಲ್ಲಿ Cultural and religious Institutions ನಿರ್ಮಾಣ ಮಾಡುತ್ತಿರುವುದಾಗಿ ಹಾಗೂ ಮೇಲುಕೋಟೆ ವನ್ಯಧಾಮದ ಸೂಕ್ಷ್ಮ ಪರಿಸರ ವಲಯದ ಅಂತಿಮ ಅಧಿಸೂಚನೆಯಂತೆ, ಅರಣ್ಯ ಪ್ರದೇಶದ ಗಡಿರೇಖೆಯಿಂದ 1.00 ಕಿ.ಮೀ.ವರೆಗೆ ಯಾವುದೇ ನಿರ್ಮಾಣ ಚಟುವಟಿಕೆಗಳಿಗೆ ಅವಕಾಶವಿರುವುದಿಲ್ಲ. ಮೇಲುಕೋಟೆ ವನ್ಯಧಾಮದ ಗಡಿರೇಖೆಯಿಂದ ಕೇವಲ 0.660 ಕಿ.ಮೀ. ಅಂತರವಿರುವುದರಿಂದ, ಸದರಿ ಪ್ರಸ್ತಾವನೆಗೆ ಅನುಮತಿ ನೀಡಲು ಬರುವುದಿಲ್ಲ ಎಂದು ಸಭೆಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗಳಿಗೆ ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ಇವರು ವಿವರಣೆ ನೀಡಿದರು.

ಈ ಬಗ್ಗೆ ಅಧ್ಯಕ್ಷರು ಅರ್ಜಿದಾರರನ್ನು ಸದರಿ ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ಉದ್ದೇಶಗಳ ಬಗ್ಗೆ ವಿವರಣೆಯನ್ನು ಕೇಳಿದಾಗ ಅರ್ಜಿದಾರರು ಸದರಿ ಪ್ರದೇಶದಲ್ಲಿ Cultural and religious Institutions ಚಟುವಟಿಕೆಗಳಡಿಯಲ್ಲಿ ಗೋಶಾಲೆ ನಿರ್ಮಾಣ ಮಾಡುತ್ತಿದ್ದು, ಇದಕ್ಕಾಗಿ ಚಿಕ್ಕದಾಗಿ ಶೆಡ್ಡು ನಿರ್ಮಾಣ ಮಾಡುವುದಾಗಿ ತಿಳಿಸಿದರು.

ನಂತರ ಶ್ರೀ ಪುಟ್ಟರಾಜು ಸಿ.ಎಸ್., ಸದಸ್ಯರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಮಾನ್ಯ ಶಾಸಕರಾದ ಪಾಂಡವಪುರ ವಿಧಾನಸಭೆ ಕ್ಷೇತ್ರ ರವರು ಮಾತನಾಡಿ ಪ್ರಸ್ತಾಪಿತ ಪ್ರದೇಶದಲ್ಲಿ ಅರ್ಜಿದಾರರು ಗೋಶಾಲೆ ನಿರ್ಮಾಣ ಮಾಡುತ್ತಿರುವುದರಿಂದ ಈ ಸಂಬಂಧ ಶೆಡ್ಡನ್ನು ನಿರ್ಮಾಣ ಮಾಡಿಕೊಳ್ಳಲು ಅನುಮತಿ ನೀಡಬಹುದೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಂತರ ಸಭೆಯಲ್ಲಿ ಸದರಿ ಪ್ರಸ್ತಾವನೆಯಂತೆ Cultural and religious Institutions ಚಟುವಟಿಕೆಗಳಡಿಯಲ್ಲಿ ಗೋಶಾಲೆಗೆ ಸಂಬಂಧಪಟ್ಟ ಶೆಡ್ಡುಗಳ ನಿರ್ಮಾಣ ಮಾಡುವುದಕ್ಕಾಗಿ ಯೋಜನೆಯ ನಕ್ಷೆಯನ್ನು ತಯಾರಿಸಿ ಸಲ್ಲಿಸುವುದರೊಂದಿಗೆ ಶೆಡ್ಡುಗಳ ನಿರ್ಮಾಣ ಮಾಡಿಕೊಳ್ಳಲು ಮಾತ್ರ ಅನುಮತಿ ನೀಡಬಹುದಾಗಿದ್ದು, ಬೇರೆ ಯಾವುದೇ ಇತರೆ ಕಟ್ಟಡಗಳ ನಿರ್ಮಾಣ ಹಾಗೂ ಬೃಹತ್ ಯೋಜನೆಗಳ ಸ್ಥಾಪನೆ ಮಾಡಬಾರದಾಗಿ ಸಭೆಯಲ್ಲಿ ತೀರ್ಮಾನಿಸಲಾಯಿತು.

**ಪ್ರಸ್ತಾವನೆ ಸಂಖ್ಯೆ-7:- ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ, ಕೆ.ಶೆಟ್ಟಿಹಳ್ಳಿ, ಚಿಕ್ಕಂಕನಹಳ್ಳಿ ಹಾಗೂ ಇತರೆ 16 ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಕುರಿತು.**

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಡ್ಯ ವಿಭಾಗ, ಮಂಡ್ಯ ರವರ ಕಛೇರಿ ಪತ್ರ ಸಂಖ್ಯೆ: ಸಿ1/ಭೂಮಿ/ಎಫ್‌ಸಿ/ಸಿಆರ್- /2021-22 ದಿನಾಂಕ: 25.10.2021 ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಮೈಸೂರು ರವರಿಗೆ ಪತ್ರ ಬರೆದು, ಶ್ರೀರಂಗಪಟ್ಟಣ

ತಾಲ್ಲೂಕಿನ ಮಹದೇವಪುರ, ಕೆ.ಶೆಟ್ಟಿಹಳ್ಳಿ, ಚಿಕ್ಕಂಕನಹಳ್ಳಿ ಹಾಗೂ ಇತರೆ 16 ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಪೈಪ್‌ಲೈನ್ ಕಾಮಗಾರಿಯು ರಂಗನತಿಟ್ಟು ಪಕ್ಷಿಧಾಮದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಈ ಬಗ್ಗೆ ಅಭಿಪ್ರಾಯವನ್ನು ನೀಡುವಂತೆ ಕೋರಿರುತ್ತಾರೆ. ಸದರಿ ಯೋಜನೆಯ ಪೈಪ್‌ಲೈನ್ ಕಾಮಗಾರಿಯ ಬಗ್ಗೆ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮಂಡ್ಯ ಇವರ ಪ್ರಸ್ತಾವನೆಯಂತೆ ಸ್ಥಳ ಪರಿಶೀಲಿಸಲಾಗಿ ಸದರಿ ಪ್ರಸ್ತಾವನೆಯಲ್ಲಿರುವ ಪ್ರದೇಶಗಳ ಪೈಕಿ ಮಹದೇವಪುರ ಅಣೆಕಟ್ಟು ಪ್ರದೇಶವು ರಂಗನತಿಟ್ಟು ಪಕ್ಷಿಧಾಮದ ಗೆಂಡೆಹೊಸಹಳ್ಳಿ ದ್ವೀಪ ಅರಣ್ಯ ಪ್ರದೇಶದಿಂದ 1.53 ಕಿ.ಮೀ ದೂರವಿರುತ್ತದೆ ಹಾಗೂ ಸೂಕ್ಷ್ಮ ಪರಿಸರ ವಲಯದ ಗಡಿರೇಖೆಯಿಂದ 0.09 ಕಿ.ಮಿ. ಒಳಗೆ ಬರುತ್ತದೆ. ಸದರಿ ಕಾಮಗಾರಿಯು ಸೂಕ್ಷ್ಮ ಪರಿಸರ ವಲಯದ ಅಧಿಸೂಚನೆಯಂತೆ ರೆಗ್ಯೂಲೆಟ್ ಚಟುವಟಿಕೆಗಳಡಿಗೆ (Regulated Activities) ಒಳಪಡುತ್ತದೆ ಎಂದು ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ಇವರು ವಿವರಣೆ ನೀಡಿದರು.

ಈ ಬಗ್ಗೆ ಅಧ್ಯಕ್ಷರು, ಸದರಿ ಪ್ರಸ್ತಾವನೆಯು ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆಯಾಗಿದ್ದು, ಮೂಲಭೂತ ಸೌಕರ್ಯವಾಗಿರುವುದರಿಂದ ಹಾಗೂ ಸದರಿ ಯೋಜನೆಯ ಸ್ಥಳವು ರಂಗನತಿಟ್ಟು ಪಕ್ಷಿಧಾಮದ ಗೆಂಡೆಹೊಸಹಳ್ಳಿ ದ್ವೀಪದಿಂದ 1.00 ಕಿ.ಮೀ.ಗಿಂತ ಹೆಚ್ಚಿನ ದೂರವಿರುವುದರಿಂದ, ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮಂಡ್ಯ ಇವರು ಕೋರಿರುವಂತೆ ಸೂಕ್ಷ್ಮ ಪರಿಸರ ವಲಯದ ಷರತ್ತುಗಳಿಗೆ ಒಳಪಟ್ಟು ಯೋಜನೆಗೆ ಅನುಮತಿ ನೀಡುವುದು ಎಂದು, ಆದರೆ ಮಂಡ್ಯ ಅರಣ್ಯ ವಿಭಾಗಕ್ಕೆ ಸಂಬಂಧಿಸಿದ ಜಾಗದಲ್ಲಿ ಅನುಮತಿ ನೀಡುವುದು ಈ ಸಮಿತಿಯ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಸದರಿ ಅರಣ್ಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿ ಹಾಗೂ ಇನ್ನಿತರೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಡ್ಯ ಪ್ರಾದೇಶಿಕ ವಿಭಾಗ, ಮಂಡ್ಯ ಇವರನ್ನು ಸಂಪರ್ಕಿಸಿ ಕಾನೂನಿನ ರೀತ್ಯ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೇಲ್ಕಂಡ ಪ್ರಸ್ತಾವನೆಗಳಲ್ಲಿ ಪ್ರಸ್ತಾವನೆ ಸಂಖ್ಯೆ : 3 ಮತ್ತು 4ರ ವಸತಿ ಬಡಾವಣೆ ನಿರ್ಮಾಣ ಪ್ರಸ್ತಾವನೆಯನ್ನು ಹೊರತುಪಡಿಸಿ , ಉಳಿದ ಪ್ರಸ್ತಾವನೆ ಸಂಖ್ಯೆ :1, 2, 5, 6 ಮತ್ತು 7 ಪ್ರಸ್ತಾವನೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸಭೆಯಲ್ಲಿ ಅನುಮೋದಿಸಲಾಯಿತು.

1) ಪ್ರಸ್ತಾವನೆಯ ಪ್ರದೇಶದಲ್ಲಿ ಪ್ರಸ್ತುತ ಇರುವ ಮರಗಿಡಗಳನ್ನು ನಾಶಪಡಿಸಬಾರದು.
2) ಸದರಿ ಪ್ರದೇಶದಲ್ಲ 1.00 ಎಕರೆಗೆ ಕನಿಷ್ಟ 10 ಮರಗಿಡಗಳನ್ನು ನೆಟ್ಟು ಬೆಳೆಸಬೇಕು.
3) ಸದರಿ ಪ್ರದೇಶದ ಸುತ್ತಮುತ್ತ ಯಾವುದೇ ಒತ್ತುವರಿ, ಅರಣ್ಯ ಉತ್ಪನ್ನ ಬಳಕೆ, ಪ್ರಾಣಿ-ಪಕ್ಷಿಗಳ ಭೇಟೆ ಹಾಗೂ ಇನ್ನೀತರೆ ಯಾವುದೇ ಅರಣ್ಯ ಅಪರಾಧಗಳು ನಡೆಯದಂತೆ ನೋಡಿಕೊಳ್ಳುವುದು.
4) ಸದರಿ ಪ್ರದೇಶದ ಸುತ್ತ ಮಣ್ಣು ಸವಕಳಿ ಆಗದಂತೆ ಎಚ್ಚರ ವಹಿಸುವುದು.
5) ಸದರಿ ಪ್ರದೇಶದಿಂದ ಹತ್ತಿರದ ಅರಣ್ಯ ಪ್ರದೇಶಗಳಿಗೆ ಬೆಂಕಿ ಕಾಲದಲ್ಲಿ ಬೆಂಕಿ ಬೀಳದಂತೆ ಎಚ್ಚರಿಕೆ ವಹಿಸುವುದು ಮತ್ತು ವನ್ಯಜೀವಿ ಸಂಪತ್ತಿಗೆ ತೊಂದರೆಯಾಗದಂತೆ ಮನ್ನೆಚರಿಗೆ ಕ್ರಮ ವಹಿಸುವುದು.
6) ಸದರಿ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯನ್ನು ಜಾರಿ ಮಾಡುವಾಗ ಯಾವುದೇ ರೀತಿಯ ಬ್ಲಾಸ್ಟಿಂಗ್/ಸಿಡಿಮದ್ದುಗಳನ್ನು ಬಳಸುವುದು ನಿಷೇದಿಸಿದೆ.
7) ಪ್ರಸ್ತಾಪಿತ ಯೋಜನೆಯ ನಿರ್ಮಾಣದಿಂದ ಹಾಗೂ ನಂತರ ಬರುವ ಆಯಿಲ್ ಹಾಗೂ ಇತರೆ ಗ್ಯಾಬೇಜ್‌ಗಳು ಯಾವುದೇ ನದಿ/ಕೊಳ/ಕಾಲುವೆಗಳಿಗೆ ಸೇರದಂತೆ ನೋಡಿಕೊಳ್ಳಬೇಕು. ಅವುಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳಂತೆ ವಿಲೇವಾರಿ ಮಾಡಬೇಕು.

8) ಸದರಿ ಪ್ರದೇಶವನ್ನು ಪ್ಲಾಸ್ಟಿಕ್ ಮುಕ್ತ ವಲಯ ಎಂದು ಘೋಷಿಸಬೇಕು.

9) ಸದರಿ ಪ್ರದೇಶದಲ್ಲಿ ರಾತ್ರಿಯ ವೇಳೆ ಪ್ರಾಣಿ-ಪಕ್ಷಿಗಳಿಗೆ ತೊಂದರೆಯಾಗದಂತಹ ಲೈಟಿಂಗ್ಸ್‌ಗಳನ್ನು ಮಾತ್ರ ಬಳಸಬೇಕು.

10) ವಾಯು, ನೀರು ಮತ್ತು ಶಬ್ದ ಮಾಲಿನ್ಯದ ಮಟ್ಟಗಳು ಮಾಲಿನ್ಯ ನಿಯಂತ್ರಣ ಮಂಡಳಿಯು ಅನುಮತಿಸುವ ನಿಯಮಗಳ ಮಿತಿಯೊಳಗೆ ಇರಬೇಕು.

11) ಪ್ರಸ್ತಾಪಿತ ಸ್ಥಳ ಅಥವಾ ಸುತ್ತಮುತ್ತಲಿನ ಪ್ರದೇಶದಲ್ಲಿ ಉದ್ದೇಶಿಸಿರುವ ಕೆಲಸಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಪಕ್ಷಿಗಳ ಗೂಡುಗಳನ್ನು ನಾಶ ಮಾಡುವುದಾಗಲಿ, ಸಂತಾನೋತ್ಪತ್ತಿ ಕಾರ್ಯಗಳಿಗೆ ಮತ್ತು ಅವುಗಳ ಆವಾಸ ಸ್ಥಾನಕ್ಕೆ ತೊಂದರೆ ಕೊಡುವುದನ್ನು ನಿಷೇಧಿಸಿದೆ.

12) ಪ್ರಸ್ತಾಪಿತ ಯೋಜನೆಯ ನಿರ್ಮಾಣ ಹಂತದಲ್ಲಿ ಅಥವಾ ನಿರ್ಮಾಣದ ನಂತರದಲ್ಲಿ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಂತಹ ಸಂದರ್ಭದಲ್ಲಿ ಕಾನೂನಿನ ಅನ್ವಯ ಸೂಕ್ತ ಕ್ರಮ ಕೈಗೊಳ್ಳಲು ಮಾನಿಟರಿಂಗ್ ಕಮಿಟಿಗೆ ಶಿಫಾರಸ್ಸು ಮಾಡಲಾಗುವುದು ಹಾಗೂ ಯಾವುದೇ ಮುನ್ಸೂಚನೆ ನೀಡದೇ ಮಾನಿಟರಿಂಗ್ ಕಮಿಟಿಯಲ್ಲಿ ನೀಡಿದ ಅನುಮತಿಯನ್ನು ಹಿಂಪಡೆಯಲಾಗುವುದು.

13) ಮೇಲಿನ ಷರತ್ತುಗಳ ಜೊತೆಯಲ್ಲಿ ಕಾಲಕಾಲಕ್ಕೆ ಸರ್ಕಾರದ ಮಟ್ಟದಲ್ಲಿ ನೀಡಲಾಗುವ ಆದೇಶಗಳ ಹಾಗೂ ವಿಧಿಸುವ ಷರತ್ತುಗಳ ಅನ್ವಯ ಮಾನಿಟರಿಂಗ್ ಕಮಿಟಿ ನೀಡುವ ನಿರ್ದೇಶನಗಳನ್ನು ಪಾಲಿಸಲು ಅರ್ಜಿದಾರರು ಬದ್ಧರಾಗಿರಬೇಕು.

ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮೈಸೂರು ರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು/ ಅಧಿಕಾರಿಯವರಿಗೆ ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

(ಡಾ|| [illegible], ಭಾ.ಅ.ಸೇ)
ಸದಸ್ಯ ಕಾರ್ಯದರ್ಶಿ,
ಮೈಸೂರು ವನ್ಯಜೀವಿ ವಿಭಾಗ ಸೂಕ್ಷ್ಮ ಪರಿಸರ
ವಲಯದ ಮಾನಿಟರಿಂಗ್ ಕಮಿಟಿ
ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ವಿಭಾಗ, ಮೈಸೂರು

(ಡಾ|| ಜಿ.ಸಿ.ಪ್ರಕಾಶ್, ಭಾ.ಆ.ಸೇ)
ಅಧ್ಯಕ್ಷರು, ಸೂಕ್ಷ್ಮ ಪರಿಸರ
ವಲಯದ ಮಾನಿಟರಿಂಗ್ ಕಮಿಟಿ.
ಮತ್ತು ಪ್ರಾದೇಶಿಕ ಆಯುಕ್ತರು
ಮೈಸೂರು ವಿಭಾಗ, ಮೈಸೂರು

**ಸಂಖ್ಯೆ: ಎ2/ಎಸಿಟಿ/ಸೂಪವಸಭೆ/ಜಿಎಲ್-1054/2018-** **ದಿನಾಂಕ: 09.02.2022**

**ಪ್ರತಿಯನ್ನು ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.**

- ✓ ಅಧ್ಯಕ್ಷರು, ಸೂಕ್ಷ್ಮ ಪರಿಸರ ವಲಯ ಮತ್ತು ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು
- ✓ ಸದಸ್ಯರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು
- ✓ ಸದಸ್ಯರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ.
- ✓ ಸದಸ್ಯರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಮಾನ್ಯ ಶಾಸಕರು, ಶ್ರೀರಂಗಪಟ್ಟಣ ವಿಧಾನಸಭೆ ಕ್ಷೇತ್ರ.

- ✓ ಸದಸ್ಯರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಪಾಂಡವಪುರ ವಿಧಾನಸಭೆ ಕ್ಷೇತ್ರ.
- ✓ ಸದಸ್ಯರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಹುಣಸೂರು ವಿಧಾನಸಭೆ ಕ್ಷೇತ್ರ.
- ✓ ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ಮತ್ತು ಮೈಸೂರು ಜಿಲ್ಲೆ.
- ✓ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮೈಸೂರು
- ✓ ಅಧೀಕ್ಷಕ ಇಂಜಿಯರ್ ಕಾವೇರಿ ನೀರಾವರಿ ನಿಗಮ, ಮೈಸೂರು
- ✓ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೈಸೂರು (ಗ್ರಾಮಾಂತರ).
- ✓ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಂಡ್ಯ.
- ✓ ವಲಯ ಅರಣ್ಯಾಧಿಕಾರಿಗಳು, ವನ್ಯಜೀವಿ ವಲಯ, ಮೈಸೂರು/ಮೇಲುಕೋಟೆ

**Proceedings of the meeting of the Eco-Sensitive Zone (ESZ) Monitoring Committee, Wildlife Sanctuaries, Mysore Division, held at 11:00 AM on 09/02/2022, presided over by Dr. G.C. Prakash, I.A.S, Chairman, ESZ Monitoring Committee and Regional Commissioner, Mysore Division.**

**Dignitaries present at the meeting:**

1. Dr. G.C. Prakash, I.A.S., Chairman, Eco-Sensitive Zone (ESZ) Monitoring Committee, and Regional Commissioner, Mysore Division, Mysore.
2. Dr. Bagadi Gowtham, I.A.S. Member, ESZ Monitoring Committee & District Commissioner, Mysore District, Mysore.
3. Sri. Ravindra Shrikantaiah, Member, ESZ Monitoring Committee, & MLA, Srirangapattana, Assembly constituency.
4. Sri. Puttaraju, C.S. Member, ESZ Monitoring Committee, & MLA, Pandavapura Legislative Assembly Constituency.
5. Sri. B.C. Shivananda Murthy, Sub-Divisional Officer, Pandavapura Sub-Division, Pandavapura.
6. Sri. K.B. Prabhuswamy, Chief Project Officer, Zilla Panchayat, Mandya District.
7. Smt. Jayalakshmi, M.G. Deputy Environmental Officer, Karnataka State Pollution Control Board, Mysore (Rural).
8. Smt.Ashwini, B.K Deputy Environmental Officer, Karnataka State Pollution Control Board, Mysore.
9. Dr. V. Karikalan, I.A.S. Member-Secretary, ESZ Monitoring Committee,& Deputy Conservator of Forests, Wildlife Division, Mysore.
10. Sri. Surendra, Zonal Forest Officer, Mysore Wildlife Zone, Mysore.
11. Sri. Subramanya, K.E. Zonal Forest Officer, Melukote Wildlife Zone, Melukote.

Dr. G.C. Prakash, I.A.S., Chairman, ESZ Monitoring Committee, & Regional Commissioner, Mysore Division, Mysore welcomed the members present at the meeting and requested Dr. V. Karikalan, I.A.S., Member- Secretary, ESZ Monitoring Committee, & Deputy Conservator of Forests, Mysore Wildlife Division, Mysore.

Member-Secretary, ESZ Monitoring Committee, & Deputy Conservator of Forests, Mysore Wildlife Division, Mysore, gave a presentation and presented the



Executive Engineer
RDW & SD. Mandya.

details regarding the jurisdiction of the Ranganathittu Bird Sanctuary and the Melukote Wildlife Sanctuary and the extent of ESZ in that jurisdiction. He also briefed the meeting regarding the activities that come under different heads like Prohibited, Regulated, and Promoted in the ESZ. He also introduced the ESZ Monitoring Committee members to the members present in the meeting. Later, he gave details about the proposal sent to the government regarding the nomination of NGOs/ Representatives.

He also gave information regarding the approvals given in the previous meeting of the ESZ Monitoring Committee and 6 proposals have come up before the committee now, which will be discussed in the current meeting.

**Proposal no. 1: By Smt. Nayana, P., D/o Puttaswamy, for the conversion of 1.10.00 guntas of land in survey no. 6/*/3 in Palahalli (Karimante) village, Belagola hobli, Srirangapatna taluk for the purposes of home stay facility.**

The Member-Secretary, ESZ Monitoring Committee & the Deputy Conservator of Forests, Wildlife, Mysore Division, told the committee that the mentioned land falls within the jurisdiction of the Ranganathittu ESZ and the proposal is for building a home stay facility. The mentioned land is about 1.21 kms away from the Puttayyanakoppalu Island of the Ranganathittu Bird Sanctuary. As per the final ESZ notification, there is no scope for any activity within 1 km range of the forest boundary. Since the mentioned land is 1.21 kms away from the Puttayyanakoppalu island, it comes under the Regulated Activities category and hence can be given approval subject to certain conditions.

The Chairman of the Monitoring Committee asked for further information regarding the mentioned land from Smt. Nayana, P. D/o Puttaswamy, and then asked for the opinion of the members present in the meeting. All the members present agreed to approve the proposal subject to certain conditions. It was decided that approval be granted by obtaining a written undertaking by the applicant to abide by the guidelines for homestay, manage the waste in a proper manner and not create noise pollution and carry out the activities without damaging the environment or disturbing the wildlife.

**Proposal no. 2: By Sri. R. Vishwanath, for conversion of 0.20.00 guntas of land in survey no. 46/*/9 in Karimanti village, Belagola Hobli, Srirangapatna**



Executive Engineer
RDW & SD. Mandya.

**taluk for conversion of land to non-agricultural purposes (commercial) for construction of a petrol bunk.**

The mentioned land falls in the ESZ jurisdiction of Ranganathittu Bird Sanctuary and is about 1.30 kms away from the Puttayyanakoppalu island in the bird sanctuary. As per the final ESZ notification, there is no scope for any activity within the 1.00 km range of the forest boundary. The Member-Secretary, ESZ Monitoring Committee & the Deputy Conservator of Forests, Wildlife, Mysore Division, told the committee that since the mentioned land lies about 1.30 kms away from the Puttayyanakoppalu island, approval can be granted, subject to certain conditions.

The Chairman called for details regarding the proposal from the applicant Sri. R. Vishwanath. Later, he asked the members present in the meeting for their opinion on the same. All the present members agreed to give conditional approval to the proposal. Hence, it was decided in the meeting to give conditional clearance to the proposal, subject to an undertaking given by the applicant to carry out his/her proposal without trespassing the laws, rules, and regulations of the government, to carry out proper waste management, not to cause noise pollution and without causing any damage to the environment and wildlife.

**Proposal no. 3: By Sri. S. Mahesh, S/o Shivabasappa, requesting the conversion of 1.20 acres of land in survey no. 228/2 in Mallinathapura village, Bilikere hobli, Hunsur Taluk, to non-agricultural land for the purpose of constructing a residential Layout.**

The mentioned land falls within the jurisdiction of the Arabithittu ESZ and is 47.03 (0.047 km) from the border of the Arabithittu wildlife sanctuary. A residential layout is being proposed in the mentioned area. As per the final notification pertaining to the ESZ in the Arabithittu Wildlife Sanctuary, there is no scope for any construction activity within 1 km of the forest border. Since the proposed land falls within the jurisdiction of the Mallinnathapura village and is located just 0.047 kms away from the Arabithittu Wildlife Sanctuary, approval cannot be given. Further, the member-secretary, ESZ Monitoring Committee Deputy Conservator of Forests, Mysore Wildlife Division, Mysore appraised the Chairman and the members present in the meeting that there is a danger of human-



Executive Engineer
RDW & SD. Mandya.

wildlife conflicts, as the proposed residential layout is very close to the wildlife sanctuary.

The Chairman asked the applicant for particulars regarding the construction of the proposed residential layout; the applicant submitted that the proposal is to construct 25 residential houses on the mentioned land.

Later, the chairman mentioned that since the proposed residential layout is very close to the Arabithittu Wildlife sanctuary and as per the final ESZ notification of the Arabithittu Wildlife sanctuary, no activity can be allowed within 1.00 km from the border of the wildlife sanctuary and as a branch of Defence Research and Development Organisation (DRDO) is situated close by, it was decided in the meeting not to give clearance to the proposed construction of the residential layout.

**Proposal no. 4: Regarding the request by Sri Ashok Patel, M. S/o Late C. Mahadevappa, for the conversion of 3.18 acres of land in survey nos. 227/1, 237/1, 228/3, and 228/4 in Mallinathapura village, Bilikere hobli, Hunsur Taluk, for non-agricultural purposes for the construction of residential layouts.**

The Member-Secretary, ESZ Monitoring Committee & Deputy Conservator of Forests, Mysore Division explained before the committee that the mentioned land falls under the jurisdiction of the Arabithittu ESZ and lies at a distance of 48.55 meters (0.048 km) from the Arabithittu forest boundary. The proposal is for the construction of a residential layout in the proposed area. As per the final ESZ Notification, there is no scope for carrying out any construction activity within a 1.00 km range of the forest boundary. The mentioned proposed land is adjacent to the land in proposal no.3 and comes under the Mallinathapura village and is at a distance of 0.048 km from the Arabithittu forest boundary, approval cannot be granted to the mentioned proposal. Also, since the proposed residential layout will be coming up close to the forest boundary, there is every likelihood of human-wildlife conflicts increasing.

Later the Chairman told the committee that the proposed presidential layout will be coming up quite close to the forest and as per the final ESZ notification, there can no construction or any other activity within the 1.00 km range of the forest boundary, and the branch of the DRDO is nearby, approval for the proposed



Executive Engineer
RDW & SD. Mandya.

residential layout cannot be granted. The members present in the meeting agreed with him and it was decided not to give approval to the proposal for the residential layout.

**Proposal no. 5: Regarding the request by Sri. K.R. Krishne Gowda, S/o O.G. Rame Gowda, for the conversion of 0.3.0.00 guntas of land in survey no. 51/*/12 in Melukote village, Melukote hobli, Pandavapura Taluk, for non-agricultural purposes (residential).**

The Member-Secretary, ESZ Monitoring Committee & Deputy Conservator of Forests, Mysore Division, placed before the committee that Sri. Krishne Gowda, S/o O.G. Rame Gowda, Melukote village, has requested permission for the construction of a residential building on land owned by him. The mentioned land comes under the jurisdiction of the ESZ and lies at a distance of 1.00 km from the forest boundary. As there are no objections to the construction of a residential building on the 0.3.0.00 guntas of land, permission can be granted.

When the Chairman queried the applicant about it, he mentioned that the proposal for constructing a residential building for his dwelling.

Since the applicant had requested for constructing a residential building for his own dwelling on the 0.3.00 guntas land, it was decided in the meeting that approval can be granted approval for construction subject to conditions.

**Proposal no. 6: Regarding the request for conversion of 1.16.0.00 acres of land in survey no. 118/*/3 in Melukote village, Melukote hobli, Pandavapura Taluk for non-agricultural (religious and cultural institutions) purposes.**

The Member-Secretary, ESZ Monitoring Committee & Deputy Conservator of Forests, Mysore Division, placed before the committee that the mentioned land falls within the jurisdiction of the ESZ of the Melukote Wildlife Sanctuary. The mentioned land is at a distance of 0.660 km from the boundary of the Melukote Wildlife Sanctuary. The proposal is for the purpose of the construction of a cultural and religious institution. As per the final ESZ notification, there is no scope for any construction activity within a 1.00 km range of the forest boundary. Since the mentioned land is just 0.660 km away from the forest boundary, approval cannot be granted.



Executive Engineer
RDW & SD. Mandya.

When the Chairman asked the applicant about the proposal, he mentioned that the proposal is for building a small cowshed for a goshala, under the Religious and Cultural activities.

Sri. C.S. Puttaraju, Member, ESZ Monitoring Committee and MLA, Pandavapura Assembly Constituency, mentioned that since the proposal is for the construction of a cowshed for goshala, approval may be granted.

Later, it was decided in the meeting that approval for the construction of a cowshed for the construction of a goshala as, under the cultural and religious institutions activity, as mentioned in the proposal and no other building activity can be permitted in the mentioned land.

**Proposal no. 7: Regarding Providing the Multi Village Drinking Water Supply Scheme to Mahadevapura, K. Shettihalli, Chikkankanahalli and 16 other villages in, Srirangapatna Taluk, Mandya District.**

The Deputy Conservator of Forests, Mandya, in his letter no. 1C/Land / FC/ CR- /2021-2022 dated 25/10/2021 had written to the Deputy Conservator of Forests, Wildlife, Mysore Division, seeking his opinion regarding the laying of pipeline Mahadevapura K. Shettihalli, Chikkankanahalli and 16 Other villages in Mahadevapura, Srirangapatna Taluk, under the Multi- Village Drinking water project, as the project area falls within the jurisdiction of the Ranganathittu ird Sanctuary ESZ. Member-Secretary, ESZ Monitoring Committee & the Deputy Conservator of Forests, Wildlife, Mysore Division, further stated that the pipeline of the mentioned proposal was examined by the Executive Engineer, Rural Drinking water and sanitation Division, Mandya, the Mahadevapura dam is located 1.53 km away from the Gendehosahalli forest island in the Ranganathittu Bird Sanctuary and falls within 0.09 km inside the ESZ. As per the ESZ notification comes under the Regulated activities area.

The Chairman mentioned that the mentioned proposal is a multi-village drinking water project and comes under the basic infrastructure and the project site is located more than 1 km away from the Gendehosahalli forest island of the Ranganathittu bird Sanctuary, approval can be granted to the project subject to certain conditions as requested by the Executive Engineer, Rural Drinking water & Sanitation department. Since the area under consideration is in the Mandya Forest Division and does not come under the jurisdiction of this committee, any



Executive Engineer
RDW & SD. Mandya.

construction or other activities in this region should be referred to the Deputy Conservator of Forests, Mandya Division, and he is requested to take action as per the law. All the members present in the meeting agreed to the Chairman's statement.

With reference to the above-mentioned proposals, with exception of proposals, no 3 and 4 pertaining to the construction of residential layouts, all the other proposals, viz, proposals no. 1, 2, 5, 6 and 7 were granted approval subject to the following conditions.

1. No trees or vegetation should be cut or damaged within the proposed site.
2. In the mentioned area at least 10 trees should be planted and grown per acre.
3. The applicant should ensure that no wildlife crimes like encroachment of forest land, use of forest produce, or hunting of wildlife or birds take place in and around the proposed area.
4. Care should be taken that there is no soil erosion in and around the proposed area.
5. Necessary care and precaution to be taken so that the wildfire does not spread to surrounding forests.
6. Blasting of dynamites is prohibited in the mentioned area where the project is being implemented.
7. Any garbage /waste generated during the project construction stage or later should not be let out into the river, streams, or canals and should be disposed of properly as per the pollution control Board's norms.
8. The mentioned area should be declared a 'Plastic-free Area'.
9. Only lighting that does not harm the wildlife should be used during night times.
10. Water, Air, and noise pollution levels should be within the permissible levels of the set by the Pollution Control Board.
11. Activities that destroy the nesting's of the birds; disrupt their breeding activities or destroy their habitats are prohibited in the mentioned project area and its surroundings.
12. In case of any violations of the conditions during or after the completion of the project, the Monitoring Committee will be appraised of these violations will be directed to take suitable action. The approval given by the Monitoring Committee may be withdrawn without notice.



Executive Engineer
RDW & SD. Mandya.

13. Along with the compliance with the above-mentioned conditions, the applicant should comply with the directions issued by the Monitoring Committee, and orders issued by the government from time to time.

The meeting concluded with a vote of thanks by the Zonal Forest Officer, Mysore Zone.

**Sd/-**
**Dr. V. Karikalan, I.A.S.**
**Member- Secretary,**
**Eco Sensitive Zone Monitoring Committee**
**&**
**Deputy Conservator of Forests,**
**Wildlife, Mysore Division, Mysore.**

**Sd/-**
**Dr. G.C. Prakash, I.A.S.**
**Chairman, Eco Sensitive Zone Monitoring Committee & Regional Commissioner,**
**Mysore Division,**
**Mysore.**

**No. A2/ ACT/ ESZ meeting/ G.L 1054/2018 dated 09/02/2022.**

**Copies to:**

- ✓ President, ESZ and Regional Commissioner, Mysore Division, Mysore.
- ✓ Member, ESZ Monitoring Committee, and District Commissioner, Mysore District, Mysore.
- ✓ Member, ESZ Monitoring Committee, and District Commissioner, Mandya District, Mandya.
- ✓ Member, ESZ Monitoring Committee, and MLA Srirangapatna Legislative Assembly.
- ✓ Member, ESZ Monitoring Committee, and MLA Pandavapura Legislative Assembly.
- ✓ Member ESZ Monitoring Committee and MLA Hunsur Legislative Assembly.
- ✓ Chief Project Officer, Zilla Panchayat, Mandya, and Mysore districts.
- ✓ Town & Country Planning Department, Mysore.
- ✓ Superintending Engineer, Kaveri Neeravari Nigam
- ✓ Environmental Officer, Karnataka State Pollution Control Board, Mysore (Rural)



Executive Engineer
RDW & SD. Mandya.

- ✓ Environmental Officer, Karnataka State Pollution Control Board, Mandya.
- ✓ Zonal Forest Officers, Wildlife Zone, Mysore/ Melukote.

Executive Engineer
RDW & SD. Mandya.